**ಎಂ.ವಿ.ಸಿ.597/2023, ಪಿ.ಡಬ್ಲ್ಯೂ-1 ಹೆಸರುಃ ಅನುಷ ಕೆ.ಆರ್**

**ದಿಃ14-01-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ.ಎಂ. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅಪಘಾತದ ಕುರಿತು ನನಗೆ ಖುದ್ದು ಮಾಹಿತಿ ಇಲ್ಲ. ಅಪಘಾತದ ಸಮಯದಲ್ಲಿ ನನ್ನ ಪತಿ ಕೆ.ಎ-17-ಎನ್-4594 ರ ಓಮಿನಿ ವಾಹನದಲ್ಲಿ ಹೋಗುತ್ತಿದ್ದರು. ಕೆ.ಎ-17-ಎನ್-4594 ರ ಓಮಿನಿ ವಾಹನಕ್ಕೆ ಸದರಿ ವಾಹನದಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಸಂಬಂಧಿಸಿದಂತೆ ವಿಮೆ ಇಲ್ಲದ ಕಾರಣ, 2 ನೇ ಎದುರುದಾರರು ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಕೆ.ಎ-17-ಎನ್-4594 ರ ಓಮಿನಿ ವಾಹನಕ್ಕೆ ಸಂಬಂಧಿಸಿದಂತೆ ಬಾದ್ಯತೆಯ ವಿಮೆ ಇರುವುದರಿಂದ ಸದರಿ ವಾಹನದ ಮಾಲೀಕರೇ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ. ಕೆ.ಎ-17-ಎನ್-4594 ರ ಓಮಿನಿ ವಾಹನದಲ್ಲಿ ಪ್ರಯಾಣಿಕರಾಗಿ ಹೋಗುವವರಿಗೂ ಸಹ ವಿಮೆ ಇತ್ತು ಎಂಬ ಬಗ್ಗೆ ವಿಮಾ ಪಾಲಿಸಿಯನ್ನು ಹಾಜರುಪಡಿಸಿಲ್ಲ. ಕೆ.ಎ-17-ಎನ್-4594 ರ ಓಮಿನಿ ವಾಹನದ ಚಾಲಕನಿಗೆ ಮಾನ್ಯತೆ ಹೊಂದಿದ ಚಾಲನಾ ಪರವಾಗಿ ಇರಲಿಲ್ಲ ಎಂದರೆ ಸರಿಯಲ್ಲ.

2. ನನ್ನ ಮೃತ ಪತಿ 10 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದರು. ನಂತರ ವಿದ್ಯಾಭ್ಯಾಸವನ್ನು ಮಾಡಿಲ್ಲ. ನನ್ನ ಮೃತ ಪತಿಗೆ ಸಂಬಂಧಿಸಿದ ಎಸ್.ಎಸ್.ಎಲ್.ಸಿ ಅಂಕಪಟ್ಟಿಯನ್ನು ಹಾಜರುಪಡಿಸಿಲ್ಲ. ನನ್ನ ಮೃತ ಪತಿ ಸಂತೇಬೆನ್ನೂರಿನ ಎಸ್.ಎಸ್.ಜೆ.ವಿ.ಸಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢಶಾಲಾ ವ್ಯಾಸಂಗ ಮಾಡಿದ್ದಾರೆ. 2 ನೇ ಎದುರುದಾರರು ಯಾವುದೇ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ಸುಳ್ಳಾಗಿ ಸೇರ್ಪಡೆ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ ಪಿ.ಎನ್ ವಕೀಲರಿಂದಃ**

3. ಅಪಘಾತದ ಸಮಯದಲ್ಲಿ ನನ್ನ ಮೃತ ಪತಿ ಹಾಗೂ ಅವರೊಂದಿಗೆ ಇತರೆ ಮೂರು ಜನ ಓಮಿನಿ ವಾಹನದಲ್ಲಿ ಪ್ರಯಾಣ ಮಾಡುತ್ತಿದ್ದರು. ಅಪಘಾತದ ಸಮಯದಲ್ಲಿ ನಾನು ನನ್ನ ತವರು ಮನೆಯಲ್ಲಿದ್ದೆನು. ಅಪಘಾತದ ಕುರಿತು ನನ್ನ ಸಂಬಂಧಿಕರು ದೂರವಾಣಿ

ಮೂಲಕ ಮಾಹಿತಿ ನೀಡಿರುತ್ತಾರೆ. ನಂತರ ನಾನು ನಾಗೇನಹಳ್ಳಿಗೆ ಹೋಗಿರುತ್ತೇನೆ. ನನ್ನ ಮೃತ ಪತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಓಮಿನಿ ವಾಹನವನ್ನು ಮಹೇಶ್ ರವರು ಚಾಲನೆ ಮಾಡುತ್ತಿದ್ದು, ನನ್ನ ಮೃತ ಪತಿ, ಅರುಣ ಮತ್ತು ಮಾಲತೇಶ್ ರವರು ಇದ್ದರು. ಅಪಘಾತದ ಕುರಿತು ನಮ್ಮ ಸಂಬಂಧಿಕರು ದೂರವಾಣಿ ಮೂಲಕ ತಿಳಿಸಿರುತ್ತಾರೆ. ಅಪಘಾತದ ಸ್ಥಳವನ್ನು ನಾನು ನಂತರ ನೋಡಿರುತ್ತೇನೆ. ಸದರಿ ರಸ್ತೆಯಲ್ಲಿ ಎರಡು ವಾಹನಗಳು ಒಂದೇ ಸಮಯದಲ್ಲಿ ಓಡಾಡಬಹುದು ಎಂದರೆ ಸರಿ. ನನ್ನ ಮೃತ ಪತಿ ಹೋಗುತ್ತಿದ್ದ ಓಮಿನಿ ವಾಹನದ ಚಾಲಕನು ಅತೀವೇಗ ಮತ್ತು ನಿರ್ಲಕ್ಷ್ಯತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಟ್ರಾಕ್ಟರ್ ಮತ್ತು ಟ್ರೈಲರ್ ಚಾಲಕನ ತಪ್ಪು ಇಲ್ಲ ಎಂದರೆ ಸಾಕ್ಷಿ ರಸ್ತೆಯಲ್ಲಿ ನಿಲ್ಲಿಸಿದ್ದರು ಎಂದು ಹೇಳುತ್ತಾರೆ.

4. ನನ್ನ ಮೃತ ಪತಿಗೆ ಇಬ್ಬರು ಸಹೋದರಿಯರು ಇದ್ದಾರೆ. ಸಹೋದರರು ಇಲ್ಲ. ನನ್ನ ಅತ್ತೆ ಮತ್ತು ನಾವು ಒಟ್ಟಿಗೆ ಇದ್ದೇವೆ ಎಂಬ ಬಗ್ಗೆ ಆಹಾರ ಪಡಿತರ ಚೀಟಿಯನ್ನು ಹೊಂದಿದ್ದೇವೆ. ಸದರಿ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಮ್ಮ ಕುಟುಂಬಕ್ಕೆ ಬಡತನ ರೇಖೆಗಿಂತ ಕಡಿಮೆ ಇರುವ ಕುರಿತಾಗಿ ಪಡಿತರ ಚೀಟಿ ಇದೆ. ಅಂತ್ಯ ಸಂಸ್ಕಾರಕ್ಕಾಗಿ ಒಂದು ಲಕ್ಷ ರೂ. ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಪತಿ ವ್ಯವಸಾಯ ಮಾಡುತ್ತಿರಲಿಲ್ಲ ಹಾಗೂ ಮಾಸಿಕ ರೂ. ಅರವತ್ತು ಸಾವಿರ ಆದಾಯ ಗಳಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲದಿದ್ದಾಗ್ಯೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ